ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 552
ಸದಸ್ಯರ ಹೆಸರು : ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವವರು : ಮುಖ್ಯಮಂತ್ರಿ
ಉತ್ತರಿಸಬೇಕಾದ ದಿನಾಂಕ : 18.07.2019

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಮಂಡ್ಯ ಜಿಲ್ಲೆಯಲ್ಲಿ ಕಳೆದ 03 ವರ್ಷಗಳಲ್ಲಿ ಎಷ್ಟು ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲಾಗಿದೆ;</td><td>ಮಂಡ್ಯ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ 898 ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲಾಗಿದೆ.

ವರ್ಷವಾರು ವಿವರ ಕೆಳಗಿನಂತಿದೆ:

<table><tr><th>ವರ್ಷ</th><th>ಘಟಕಗಳ ಸಂಖ್ಯೆ</th></tr><tr><td>2016–17</td><td>277</td></tr><tr><td>2017–18</td><td>290</td></tr><tr><td>2018–19</td><td>331</td></tr></table></td></tr>
<tr><td>ಆ)</td><td>ಮಂಡ್ಯ ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಎಷ್ಟು ಜಮೀನನ್ನು ಗುರುತಿಸಲಾಗಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು)</td><td>ಮಂಡ್ಯ ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಈ ಕೆಳಕಂಡಂತೆ ಜಮೀನನ್ನು ಗುರುತಿಸಲಾಗಿದೆ.

ತಾಲ್ಲೂಕುವಾರು ವಿವರ:-

1. ನಾಗಮಂಗಲ–1,500 ಎಕರೆ. (ಜಮೀನು ಗುರುತಿಸಿದ್ದು ಅಭಿವೃದ್ಧಿಪಡಿಸಬೇಕಾಗಿರುತ್ತದೆ)
2. ಮಂಡ್ಯ (ತೂಬಿನಕೆರೆ)–141 ಎಕರೆ. (ಅಭಿವೃದ್ಧಿಪಡಿಸಿ ಹಂಚಿಕೆ ಮಾಡಲಾಗಿರುತ್ತದೆ.)
3. ಮದ್ದೂರು (ಸೋಮನಹಳ್ಳಿ, ಗೆಜ್ಜಲಗೆರೆ)– 154+78 ಎಕರೆ (ಅಭಿವೃದ್ಧಿಪಡಿಸಿ ಈಗಾಗಲೇ ಹಂಚಿಕೆ ಮಾಡಲಾಗಿದೆ.)
4. ಶ್ರೀರಂಗಪಟ್ಟಣ (ಹೆಬ್ಬಾಳ–2ನೇ ಹಂತ) –197 ಎಕರೆ (ಅಭಿವೃದ್ಧಿಪಡಿಸಿ ಈಗಾಗಲೇ ಹಂಚಿಕೆ ಮಾಡಲಾಗಿದೆ.)
5. ಕೆ.ಆರ್.ಪೇಟೆ–154 ಎಕರೆ. (ಮೆಗಾ ಫುಡ್ ಪಾರ್ಕ್‌ಗಾಗಿ ಹಂಚಿಕೆ ಮಾಡಲಾಗಿದೆ.)</td></tr>
<tr><td>ಇ)</td><td>ಅಭ್ಯರ್ಥಿಗಳು ಗುರುತಿಸಿರುವ ಜಮೀನಿನಲ್ಲಿ ಹೊಸದಾಗಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಸ್ಥಳ ಪಡೆಯಲು ಇರುವ ಮಾನದಂಡಗಳು ಮತ್ತು ವಿಧಾನಗಳೇನು?</td><td>ಅಭ್ಯರ್ಥಿಗಳು ಗುರುತಿಸಿರುವ ಜಮೀನಿನಲ್ಲಿ ಹೊಸದಾಗಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಈ ಕೆಳಕಂಡ ಮಾನದಂಡ ಹಾಗು ವಿಧಾನಗಳನ್ನು ಅನುಸರಿಸಬೇಕಾಗಿರುತ್ತದೆ:-

1. ಅಭ್ಯರ್ಥಿಯು ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಗೆ ಅನುಮತಿ ಕೋರಿ ಅರ್ಜಿ ಸಲ್ಲಿಸಬೇಕಾಗಿರುತ್ತದೆ.

2. ಅಭ್ಯರ್ಥಿಯು ಅವಶ್ಯಕ ಸ್ಥಳ ಪಡೆಯಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ವೆಬ್‌ಸೈಟ್ ಮುಖಾಂತರ ಆನ್‌ಲೈನ್‌ನಲ್ಲಿ / ಕೆ.ಎಸ್.ಎಸ್.ಐ.ಡಿ.ಸಿ. ನಿಗಮಕ್ಕೆ ಅರ್ಜಿ ಸಲ್ಲಿಸಬೇಕಾಗಿರುತ್ತದೆ.</td></tr>
</table>

ಕ್ರಸಂ.	ಪ್ರಶ್ನೆ	ಉತ್ತರ
		3. ಖಾಸಗಿ ಭೂಮಿ ಅವಶ್ಯವಿದ್ದಲ್ಲಿ ಕೃಷಿಯೇತರ ಚಟುವಟಿಕೆಗಾಗಿ ಭೂಪರಿವರ್ತನೆ ಮಾಡಿಸಿಕೊಳ್ಳಬೇಕಾಗುತ್ತದೆ. 4. ಅಭ್ಯರ್ಥಿಯು ಯೋಜನಾ ವರದಿಯೊಂದಿಗೆ ಜಿಲ್ಲಾ ಮಟ್ಟದಲ್ಲಿ ನಿವೇಶನ ಹಂಚಿಕೆಗಾಗಿ ಇರುವ ಉಪ ಸಮಿತಿ ಮತ್ತು ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿಯ ಮುಂದೆ ಸಂದರ್ಶನಕ್ಕಾಗಿ ಹಾಜರಾಗಬೇಕಾಗಿರುತ್ತದೆ. ಮುಂದುವರೆದು, ಅಭ್ಯರ್ಥಿಯ ಯೋಜನೆಯು ಲಾಭದಾಯಕ ಹಾಗೂ ಸೂಕ್ತವೆನಿಸಿದಲ್ಲಿ ಸದರಿ ಕೈಗಾರಿಕೆಯನ್ನು ಸ್ಥಾಪಿಸಲು ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಅನುಮತಿ ನೀಡಲಾಗುತ್ತದೆ.

ಸಿಐ 75 ಸಿಎಸ್‌ಸಿ 2019

ಹೆಚ್.ಡಿ. ಕುಮಾರಸ್ವಾಮಿ
ಮುಖ್ಯಮಂತ್ರಿ